ಶ್ರೀ ಎಚ್. ಎಸ್. ಸಿದ್ದಪ್ಪ.—ಸ್ವಾಮಿ, ಸ್ವಾತಂತ್ರ್ಯ ಬಂದಮೇಲೆ ಈ ನಾಟಕ ಕೆಂಪೆನಿಗಳು ನಶಿಸಿ ಹೋಗುತ್ತಿವೆ. ಅದ್ದರಿಂದ ನಾಟಕ ಕಲೆಯನ್ನು ಉದ್ಧಾರ ಮಾಡುವ ದೃಷ್ಟಿಯಿಂದ ಅತ್ಯುತ್ತಮವಾದ ನಾಟಕ ಕಂಪನಿಗಳಿಗೆ ಸರ್ಕಾರದವರು ಸಹಾಯ ಮಾಡುತ್ತೀರಾ ?

ಶ್ರೀ ಎ. ಆರ್. ಬದರೀನಾರಾಯಣ್.—ನರಿಯಾಗಿ ಚೆನ್ನಾಗಿ ನಡೆಯುತ್ತಾ ಇರತಕ್ಕ ನಾಟಕ ಕಂಪೆನಿಗಳಿಗೆ ಸರ್ಕಾರದವರು ಪ್ರೋತ್ಸಾಹವನ್ನು ಕೊಡುತ್ತಿದ್ದಾರೆ.

ಶ್ರೀ ಗಟ್ಟಿ ಚಂದ್ರಶೇಖರ್.— ಸಂಗೀತನಾಟಕ ಅಕೆಡಮಿಯವರು ಹೇಳಿದ ಸ್ಥಳದಲ್ಲಿ ಸ್ವಂತ ಖರ್ಚಿನಲ್ಲಿ 6 ನಾಟಕಗಳನ್ನು ಅಭಿನಯಿಸಿದರೆ 6 ಸಾವಿರ ರೂಪಾಯಿಗಳನ್ನು ನಾಟಕಕ್ಕೂ 6 ಸಾವಿರ ರೂಪಾಯಿಗಳನ್ನು ಸಾಲವಾಗಿಯೂ ಕೊಡುತ್ತಾರೆಂದು ಗೊತ್ತಾಗಿವೆ. 6 ನಾಟಕಗಳನ್ನು ಅಭಿನಯಿಸಬೇಕಾದರೆ 10-15 ಸಾವಿರ ರೂಪಾಯಿಗಳು ಖರ್ಚಾಗುತ್ತದೆ. ಅದ್ದರಿಂದ ತಾವು ನಾಟಕಕಲೆಯಲ್ಲಿ ಒಳ್ಳೆಯ ಅಭಿರುಚಿಯುಳ್ಳವರು ; ತಾವು ಚಿಕ್ಕವಯಸ್ಸಿದಲ್ಲಿ ಸ್ತ್ರೀಪಾತ್ರವನ್ನು ಮಾಡುತ್ತಿದ್ದಿರಿ ಎಂದು ನಾನು ಕೇಳಿದ್ದೇನೆ ; ಆದಕಾರಣ ತಾವು ಇದನ್ನು ಮನಸ್ಸಿಗೆ ಹಾಕಿಕೊಂಡು ಸಹಾಯ ಮಾಡಿ ಈ ನಾಟಕ ಕಲೆಯನ್ನು ಉಳಿಸುತ್ತೀರಾ ?

ಶ್ರೀ ಎ. ಆರ್. ಬದರೀನಾರಾಯಣ್.—ನಾನು ಸ್ತ್ರೀಪಾತ್ರವನ್ನು ಮಾಡುತ್ತಿದ್ದುದು ನನಗೆ ಜ್ಞಾಪಕವಿಲ್ಲ. ಯಾರನ್ನೋ ಮಾನ್ಯಸದಸ್ಯರು ತಪ್ಪು ತಿಳಿದುಕೊಂಡಿದ್ದಾರೆ ಎಂದು ಕಾಣುತ್ತದೆ. ಹೊಸನಾಟಕಗಳಿಗೆ ಪ್ರೋತ್ಸಾಹವನ್ನು ಕೊಡತಕ್ಕಂಥಾದ್ದನ್ನು ನಾನು ಒಪ್ಪುತ್ತೇನೆ. ಆದರೆ ಈಗಿನ ಆರ್ಥಿಕ ಸ್ಥಿತಿಯಲ್ಲಿ ಅದು ಫೀಜಿಬಲ್ ಅಲ್ಲ, ಧನಸಹಾಯ ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಸರ್ಕಾರದವರು ತೀರ್ಮಾನ ಮಾಡಿದ್ದಾರೆ.

Collection of Various Funds from the School Boys

62. **Sri M. M. SAJJAN** (Muddebihal).—

Will the Minister for Education be pleased to state :—

(*a*) whether the Government is aware of the fact that many of the private educational instutions in Bijapur District collect coercively the building fund, testimonial fund, school leaving certificate fund, etc., from their students ;

(*b*) if so, whether the Government would propose to take any action against such institutions ?

Sri A. R. BADARINARAYANA (Minister for Education).—

(*a*) No.

(*b*) Does not arise in view of reply to clause (*a*) above.

ಶ್ರೀ ಎಂ. ಎಂ. ಸಜ್ಜನ್.—ಬಿಜಾಪುರ ಜಿಲ್ಲೆಯಲ್ಲಿ ಎಲ್ಲಾ ಶಿಕ್ಷಣ ಸಂಸ್ಥೆಗಳಿಗೂ ಬರೆದು ಕೇಳಿದ್ದೀರಾ ?

† ಶ್ರೀ ಎ. ಆರ್: ಬದರಿನಾರಾಯಣ.—ಹಾಗೆ ಕೇಳಿಲ್ಲ.

ಶ್ರೀ ಎಂ. ಎಂ. ಸಜ್ಜನ್.—ಬಿಜಾಪುರ ಜಿಲ್ಲೆಯಲ್ಲಿ ಎಲ್ಲಾ ಖಾಸಗೀ ಶಾಲೆಯವರು ಕಟ್ಟಡ ನಿಧಿ ಪ್ರಮಾಣ ಪತ್ರ ನಿಧಿ ಮುಂತಾದುವುಗಳನ್ನು ಸಂಗ್ರಹಿಸುತ್ತಿದ್ದಾರೆ. ಅವುಗಳನ್ನು ಸರ್ಕಾರದ ಗಮನಕ್ಕೆ ತಂದರೆ ಯಾವ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎ. ಆರ್. ಬದರಿನಾರಾಯಣ.—ಸರ್ಕಾರದಿಂದ ಸರ್ಕ್ಯುಲರ್ ಇಶ್ಯು ಮಾಡಿದೆ. ಬರಾತ್ಕಾರವಾಗಿ ಯಾರಿಂದಲೂ ವಸೂಲು ಮಾಡಬಾರದು ಎಂದು ಹೇಳಿದ್ದೇವೆ. ವಾಲಂಟರಿಯಾಗಿ ಯಾರಾದರೂ ಕೊಟ್ಟರೆ ತೆಗೆದುಕೊಳ್ಳಬಹುದು. ಅದಕ್ಕೆ ವಿರುದ್ಧವಾಗಿ ಯಾರಾದರೂ ತಪ್ಪು ಮಾಡಿದರೆ ಅವರ ರೆಕಾಗ್ನಿಕಷನ್‌ವಿತ್‌ಡ್ರಾ ಮಾಡುತ್ತೇವೆ ; ಮತ್ತು ಗ್ರಾಂಟನ್ನು ನಿಲ್ಲಿಸುತ್ತೇವೆ.

ಶ್ರೀ ಪಿ. ಎಂ. ಬಂಗಿ.—ತಾವು ಇದರ ಬಗ್ಗೆ ಏನೊಂದು ಆಜ್ಞೆ ಕೊಟ್ಟಿದ್ದೀರಿ ಅದಕ್ಕೆ ವಿರುದ್ಧವಾಗಿ ಜಮಖಂಡಿ ತಾಲೂಕಿನಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯಿಂದಲೂ ಕಟ್ಟಡ ಫಂಡನ್ನು ವಸೂಲು ಮಾಡಿದ್ದಾರೆ. ಅದರ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಳ್ಳುತ್ತೀರಿ ?

ಶ್ರೀ ಎ. ಆರ್. ಬದರಿನಾರಾಯಣ.—ಹಾಗೆ ಕಡ್ಡಾಯವಾಗಿ ವಸೂಲು ಮಾಡತಕ್ಕದ್ದು ಸರ್ಕಾರದ ಗಮನಕ್ಕೆ ಬಂದರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಎಂ. ಸಜ್ಜನ್.—ಮುದ್ದೇಬಿಹಾಳ್‌ನಲ್ಲಿ ಖಾಸಗೀ ಸಂಸ್ಥೆಯವರು ಬಲಾತ್ಕಾರವಾಗಿ ಈ ರೀತಿ ಹಣವನ್ನು ವಸೂಲು ಮಾಡುತ್ತಾರೆ. ಅದರ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎ. ಆರ್. ಬದರಿನಾರಾಯಣ.—ಅದು ಒಂದು ಜನರಲ್ ಸ್ಟೇಟ್‌ಮೆಂಟ್ ಆಯಿತು. ಇಂಥವರು ಮಾಡುತ್ತಾರೆಂದು ಹೇಳಿದರೆ, ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬಹುದು.

ಶ್ರೀ ಪಿ. ಎಂ. ಘಾಡಿ.—ಇದರ ಬಗ್ಗೆ ಒಂದು ಏಕ ಸದಸ್ಯ ಆಯೋಗ ನೇಮಿಸಿದ್ದೀರಿ. ಅದರ ವರದಿ ಏನಾದರೂ ಬಂದಿದೆಯೇ ?

ಶ್ರೀ ಎ. ಆರ್. ಬದರಿನಾರಾಯಣ.—ಆ ಆಯೋಗ ಇನ್ನೂ ಎನ್‌ಕ್ವಾಯರಿ ಮಾಡುತ್ತಿದೆ. ಅಂಕಿ ಅಂಶಗಳನ್ನು ಸಂಗ್ರಹಿಸುತ್ತಿದ್ದಾರೆ. ಇನ್ನೂ ಅದರ ರಿಪೋರ್ಟು ಬಂದಿಲ್ಲ.

ಶ್ರೀ ಎನ್. ಬಸವಯ್ಯ.—ಖಾಸಗೀ ಸಂಸ್ಥೆಯವರು ಡೊನೇಶನ್ ಕಲೆಕ್ಟ್ ಮಾಡಬಾರದ ಎಂದು ಆದೇಶವನ್ನು ಕೊಟ್ಟಿದ್ದೀರಿ. ಆದರೆ ಅವರಿಗೆ ಇದರಿಂದ ಸ್ವಲ್ಪ ತೊಂದರೆಯಾಗುತ್ತದೆ ಆದ್ದರಿಂದ ಬೆಟರ್‌ಮೆಂಟ್ ಫೀ ಏನು ಕಲೆಕ್ಟ್ ಮಾಡುತ್ತಿದ್ದಾರೆ, ಅದರಲ್ಲಿ 50 ಪರ್‌ಸೆಂಟ್ ಆಯಾ ಸಂಸ್ಥೆಗೆ ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

Sri A. R. BADARINARAYANA.—It is a suggestion for action.

Villages having no Wells in Muddebihal Taluk

64. Sri M. M. SAJJAN (Muddebihal).—

Will the Minister for Community Development and Social Welfare be pleased to state :—

(*a*) the villages having no wells in Muddebihal taluk of Bijapur District ;

(*b*) the reason for not sinking wells in these villages by the Government ;

(*c*) whether these villagers are in a positian to raise popular contributions to construct the wells ?

Sri M. MALLIKARJUNASWAMY (Minister for Community Development and Social Welfare).—

(*a*) The following are the four villages having no wells :

(1) Baladinni.
(2) Takkalki.
(3) Karkur.
(4) Jinjaraguddi.